**ಪಾಠ–9** **ಆಗಸ್ಟ್ 22–28**

# ಗೆಲುವಿನ ಧೋರಣೆ ಬೆಳೆಯಿಸಿಕೊಳ್ಳುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೋಹಾನ 4:27–30, 39–42; ಮತ್ತಾಯ 15:21–28; 2 ಥೆಸ 1:1–4; ರೋಮ 15:7; ಎಫೆಸ 4:32; 1 ಪೇತ್ರ 3:15.

**ಸ್ಮರಣವಾಕ್ಯ : "ಅವರ ಬೆದರಿಸುವಿಕೆಗೆ ಹೆದರದೆ ಕಳವಳಪಡದೆ ಕ್ರೈಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ. ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವುದಕ್ಕೆ ಯಾವಾಗಲೂ ಸಿದ್ಧರಾಗಿರಿ; ಆದರೆ ಅದನ್ನು ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ ಹೇಳಿರಿ** (1 ಪೇತ್ರ 3:15).

ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನು ನಾವು ಎಷ್ಟು ಹೆಚ್ಚೆಚ್ಚು ಅಧ್ಯಯನ ಮಾಡುತ್ತೇವೊ, ತನ್ನ ಜನರನ್ನು ಅಂಗೀಕಾರ ಮಾಡಿಕೊಳ್ಳುವ ಆತನ ಸಾಮರ್ಥ್ಯವನ್ನು ಕಂಡ ನಾವು ಅಷ್ಟೇ ಹೆಚ್ಚಾಗಿ ಆಶ್ಚರ್ಯಪಡುವವರಾಗಿದ್ದೇವೆ. ತನ್ನ ಕಾಲದ ಧಾರ್ಮಿಕ ನಾಯಕರುಗಳನ್ನು ಮನನೋಯಿಸುವ ಹಾಗೆ ಆತ ನಿಂದಿಸಿದ್ದರೂ, ಪಾಪದಿಂದ ನರಳುತ್ತಿರುವವರನ್ನೂ, ಅಪರಾಧಿ ಮನೋಭಾವದಿಂದ ವೇದನೆಗೊಳಗಾದವರನ್ನೂ, ಮತ್ತು ನಿರೀಕ್ಷೆಯೇ ಇಲ್ಲವೆಂಬಂತೆ ಖಂಡಿಸಲ್ಪಟ್ಟವರನ್ನೂ ಆತ ಬಹಳ ಸಂತೋಷವಾಗಿ ಸ್ವೀಕಾರ

* **ಆಗಸ್ಟ್ 29ರ ಸಬ್ಬತ್ತಿಗೆ ಸಿದ್ಧವಾಗುವ ಸಲುವಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.**

ಮಾಡಿಕೊಂಡಿದ್ದನು. ಆತನ ಕೃಪೆ ಅವರೊಂದಿಗಿತ್ತು. ನೀಚರೆನಿಸಿಕೊಂಡ ಪಾಪಿಷ್ಟರಿಗೂ ಸಹ ಆತನ ಕರುಣೆ ವಿಸ್ತರಿಸಲಾಗಿತ್ತು. ಅವರ ಪಾಪದ ಆಳಕ್ಕಿಂತ, ಆತನ ಕ್ಷಮೆಯ ಆಳ ಅಪರಿಮಿತ. ಆತನ ಪ್ರೀತಿಗೆ ಮೇರೆಯೇ ಇಲ್ಲ.

ಯೇಸು ಎಂದೂ, ಯಾವತ್ತೂ ಲವಲೇಶ ಹಮ್ಮು ತೋರಿದವನಲ್ಲ ಅಥವಾ ತಾನೇ ಶ್ರೇಷ್ಠ ಎಂದವನಲ್ಲ. ಪ್ರತಿ ಮಾನವ ದೇವರಿಂದ ಸೃಷ್ಟಿಸಲ್ಪಟ್ಟವನು, ಆದರೆ ಅವನು ಪಾಪದಿಂದ ಪ್ರಪಾತಕ್ಕೆ ಬಿದ್ದವನು. ಅವನನ್ನು ರಕ್ಷಿಸಲಿಕ್ಕೆ ಬಂದವನೇ ನಾನು ಎಂದು ಯೇಸು ಚೆನ್ನಾಗಿಯೇ ತಿಳಿದುಕೊಂಡಿದ್ದನು. ಆತನ ಪ್ರೀತಿಯನ್ನು ಮೀರಿ ಹೊರಗಿರುವವರು ಯಾರೂ ಇಲ್ಲ. ಆತನ ಕೃಪೆ ಮುಟ್ಟಲಿಕಾಗದಷ್ಟು, ಆಳದ ಪ್ರಪಾತಕ್ಕೇನು ಅವರು ಬಿದ್ದುಹೋಗಿಲ್ಲ. ತನ್ನ ಬಳಿಗೆ ಬಂದವರಿಗೆಲ್ಲ ಆತ ಗೌರವ ತೋರಿದ್ದನು. ಅವರಿಗೆ ಸಲ್ಲಬೇಕಾದ ಮರ್ಯಾದೆಸಲ್ಲುವ ಹಾಗೆ ನಡೆದುಕೊಂಡಿದ್ದನು. ಜನರ ಮೇಲೆ ತನಗೆ ವಿಶ್ವಾಸ ಇದ್ದುದರಿಂದಲೇ ಅವರನ್ನು ತನ್ನ ರಾಜ್ಯಕ್ಕೆ ಬರುವ ಹಾಗೆ ಅವರ ಮೇಲೆ ಪ್ರಭಾವ ಬೀರಿದ್ದನು.

ಆತನ ಪ್ರಸನ್ನತೆಯಲ್ಲಿ ಅವರ ಜೀವನಗಳು ಬದಲಾಗಿದ್ದವು, ಯಾಕೆಂದರೆ ಆತನು ಅವರನ್ನು ಅಷ್ಟೊಂದು ಆಳವಾಗಿ ಆರೈಕೆ ಮಾಡಿದ್ದನು. ಆತನು, ಅವರ್ಯಾರಾಗುವರೆಂದು ನಂಬಿದ್ದನೋ, ಎದ್ದಾಗ (ಪುನರುತ್ಥಾನವಾದಾಗ) ಅವರು ಅದೇ ಆಗಿರುವರು.

**ಈ ವಾರದ ಪಾಠದಲ್ಲಿ, ಜನರ ಬಗ್ಗೆ ಯೇಸುವಿಗಿದ್ದ ಮನೋವೃತ್ತಿ ಏನು ಎಂಬುದನ್ನು ಪರಿಶೋಧಿಸೋಣ. ಮತ್ತು ಪರಿಶೋಧಿಸಿ ಕಂಡುಕೊಂಡ ತಪ್ಪುಗಳನ್ನು ನಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳಬೇಕು ಎಂಬುದನ್ನೂ ತಿಳಿದುಕೊಳ್ಳೋಣ.**

**ಭಾನುವಾರ** **ಆಗಸ್ಟ್ 23**

## ಸುವಾರ್ತೆಗೆ ಗ್ರಹಣಾಕಾಂಕ್ಷೆ

**ಯೋಹಾನ 4:27–30; 39–42ನ್ನು ಓದಿಕೊಳ್ಳಿರಿ. ಯೇಸುಸ್ವಾಮಿ, ಸಮಾರ್ಯ ಹೆಂಗಸಿನೊಂದಿಗೆ ಮಾಡಿದ ಸಂವಾದವು, ಸತ್ಯವನ್ನು ಕುರಿತು ನಾವು ನಿರೀಕ್ಷಿಸದ**

**ಸ್ಥಳದಲ್ಲಿಯೂ, ಜನರನ್ನು ಸುವಾರ್ತೆಗೆ ಹೃದಯ ತೆರೆದುಕೊಳ್ಳುವಂತೆ ಮಾಡುವುದು ಎಂದು ಅರ್ಥಮಾಡಿಕೊಳ್ಳುವುದು ಹೇಗೆ?**

____________________________________________

____________________________________________

ಸುವಾರ್ತೆಗೆ ಗ್ರಹಣಾಕಾಂಕ್ಷೆಯ ಹೃದಯಗಳನ್ನು ಕೊನೆಗೆ ಸಮಾರ್ಯದವರಲ್ಲೂ ನಿರೀಕ್ಷಿಸಬಹುದು ಎಂಬುದನ್ನು ಮನಗಂಡರು ಕ್ರಿಸ್ತನ ಶಿಷ್ಯರು. ಸಮಾರ್ಯದವರು ಆಧ್ಯಾತ್ಮಿಕ ತತ್ವಗಳು ಮತ್ತು ಆರಾಧನೆಯ ವಿಷಯದಲ್ಲಿ ಸತತವಾಗಿ ಯೆಹೂದಿಗಳೊಂದಿಗೆ ಘರ್ಷಣೆಗಿಳಿದಿದ್ದರು. ಇಂಥ ವೈರತ್ವ ದಶಕ ದಶಕಗಳಷ್ಟು ಹಳೆಯದಾಗಿತ್ತು. ಸಮಾರ್ಯದವರು ದೇವಾಲಯ ಕಟ್ಟೋಣದಲ್ಲಿ ಕೈಜೋಡಿಸ ಬಯಸಿದರು, ಆದರೆ ಅವರಲ್ಲಿದ್ದ ಅನ್ಯಜನಾಂಗದೊಂದಿಗಿನ ಅಂತರ್ಜಾತಿ ವಿವಾಹ ಮತ್ತು ಅವರ ಅಸಂಪ್ರದಾಯಕ ದೃಷ್ಟಿಕೋನದ ನಿಮಿತ್ತ ಅವರ ಕೋರಿಕೆಯನ್ನು ನಿರಾಕರಿಸಲಾಗಿತ್ತು. ಇದರ ಫಲಿತಾಂಶವಾಗಿ ಸಮಾರ್ಯದವರು ಗೆರಿಜ್ಜೀಮ್ ಬೆಟ್ಟದ ಮೇಲೆ ತಮ್ಮ ದೇವಾಲಯವನ್ನು ಕಟ್ಟಿಕೊಂಡಿದ್ದರು. ಸುವಾರ್ತೆ ಸಾರುವುದಕ್ಕೆ ಸಮಾರ್ಯ ಫಲವತ್ತಾದ ಭೂಮಿಯಲ್ಲವೆಂದು ಶಿಷ್ಯರು ಅದನ್ನು ಕೈಬಿಡುವುದಕ್ಕಿದ್ದರು. ಶಿಷ್ಯರು ಏನನ್ನು ಕಾಣಲಾಗಲಿಲ್ಲವೋ ಅದನ್ನು ಗುರು ಕಂಡಿದ್ದನು. ಗ್ರಹಣಾಕಾಂಕ್ಷೆಯ ಹೃದಯಗಳು ಸಮಾರ್ಯದಲ್ಲಿದ್ದವು. ಯೋಹಾನನ, ಬಾವಿಯ ಬಳಿಯ ಹೆಂಗಸಿನ ಕಥೆ ಹೀಗೆ ಆರಂಭವಾಗುತ್ತದೆ : **"ಆತನು ಯೂದಾಯವನ್ನು ಬಿಟ್ಟು ಗಲಿಲಾಯಕ್ಕೆ ತಿರಿಗಿಹೋದನು.... ಆತನು ಸಮಾರ್ಯ ಸೀಮೆಯನ್ನು ಹಾದು ಹೋಗಬೇಕಾಯಿತು"** (ಯೋಹಾನ 4:3,4). ಆ ಅಸಂಭವ ಸ್ಥಳದಲ್ಲೂ ಸುವಾರ್ತೆಗೆ ಆಕಾಂಕ್ಷಿಗಳಿದ್ದಾರೆಂದು ಪವಿತ್ರಾತ್ಮ ದೇವರು ಕ್ರಿಸ್ತನ ಮನಸ್ಸನ್ನು ಒಡಂಬಡಿಸಿದ್ದರಿಂದ, ಕ್ರಿಸ್ತನು ಸಮಾರ್ಯವನ್ನು ಹಾದುಹೋಗಬೇಕಾಯಿತು. ನಮ್ಮ ಕಣ್ಣುಗಳು ಪವಿತ್ರಾತ್ಮನಿಂದ ದೈವಿಕವಾಗಿ ಅಭಿಷೇಕಿಸಲ್ಪಟ್ಟಾಗ ಬೇರೆಯವರು ಯಾವ ಸ್ಥಳವನ್ನು ಸುವಾರ್ತೆ ಸಾರಲು ಕಷ್ಟ ಎನ್ನುವರೋ, ಆ ಸ್ಥಳ ನಮಗೆ ಸುವಾರ್ತೆ ಸಾರಲು ಸಾಧ್ಯ ಎನಿಸುತ್ತದೆ. ದೇವರ ರಾಜ್ಯಕ್ಕೆ ಆತ್ಮಗಳನ್ನು ಗೆಲ್ಲಲು

ಆ ಸ್ಥಳ ಬೇರೆಯವರಿಗೆ ಬಂಜರು ಭೂಮಿಯಾಗಿ ಕಂಡರೆ, ನಮಗೋ ಅದು ಆತ್ಮಗಳ ಸಂಪದ್ಭರಿತ ಕೊಯ್ಲು ಆಗುವ ಸಾಧ್ಯತೆ ಎದ್ದು ಕಾಣುವದು.

**ಅ.ಕೃ. 8:4,5,14ನ್ನು ಓದಿಕೊಳ್ಳಿರಿ. ಯೇಸುಸ್ವಾಮಿ ಸಮಾರ್ಯದಲ್ಲಿ ಮಾಡಿದ ದೇವರ ಸೇವೆಯ ಅಂತ್ಯ ಫಲಿತಾಂಶವೇನು?**

ಕ್ರಿಸ್ತನ ಶಿಷ್ಯರು ಸಮಾರ್ಯದಲ್ಲಿ ಹಾದುಹೋಗಿರಬಹುದು. ಆದರೆ ದೇವರ ವಾಕ್ಯದಲ್ಲಿರುವ ಸತ್ಯವನ್ನು ಕೇಳಿಸಿಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನೇ ಮಾಡಿಕೊಟ್ಟಿರಲಿಲ್ಲ. ಅವರು ಆ ಸ್ಥಳದಲ್ಲಿ ಕಾಣದಿದ್ದನ್ನು, ಯೇಸುಸ್ವಾಮಿ ಕಂಡಿದ್ದನು. ಪವಿತ್ರಾತ್ಮ ದೇವರು ಒಬ್ಬ ಸ್ತ್ರೀಯ ಹೃದಯದಲ್ಲಿ ಸತ್ಯ ಸ್ವೀಕಾರ ಮಾಡಿಕೊಳ್ಳುವ ಮನೋಭಾವ ಉಂಟು ಮಾಡಿರುವುದನ್ನು ಯೇಸುಸ್ವಾಮಿ ಗುರುತಿಸಿದ್ದನು. ಆಕೆಯ ಮನಃಪರಿವರ್ತನೆ ಆ ನಗರದ ಜನರ ಮೇಲೆ ಅಪಾರವಾದ ಪರಿಣಾಮ ಬೀರಿತ್ತು. ನಮ್ಮ ಸಾಕ್ಷಿಯ ಚಟುವಟಿಕೆ ಯಾವಾಗಲೂ ತಕ್ಷಣ ಫಲಿತಾಂಶ ತಂದುಕೊಡುವುದಿಲ್ಲ. ಆದರೆ ಯಾವ ಸ್ವೀಕಾರ ಮನೋಭಾವದ ಹೃದಯದಲ್ಲಿ ಬೀಜ ಬಿತ್ತಿರುತ್ತೇವೋ, ಅದು ಒಂದು ದಿನ ದೇವರ ಮಹಿಮೆಗಾಗಿ ಸುಗ್ಗಿಯನ್ನು ತಂದುಕೊಂಡುವುದಂತೂ ದಿಟ.

**ಒಳ್ಳೆಯದಕ್ಕೋ ಅಥವಾ ಕೆಟ್ಟದಕ್ಕೋ ಬೇರೆಯವರ ಮೇಲೆ ನಮ್ಮ ಮಾತುಗಳು ಯಾವ ಪರಿಣಾಮ ಬೀರುತ್ತದೋ ನಮಗೆ ಖಚಿತವಾಗಿ ಗೊತ್ತಾಗುವುದಿಲ್ಲ. ಆದ್ದರಿಂದಲೇ ಇನ್ನೊಬ್ಬರ ಮುಂದೆ ನಾವು ಹೇಗೆ ನಡೆದುಕೊಳ್ಳುತ್ತೇವೆ ಮತ್ತು ಏನು ಮಾತಾಡುತ್ತೇವೆ ಎಂಬುದರ ಬಗ್ಗೆ ಯಾವಾಗಲೂ ಎಚ್ಚರದಿಂದಿರಬೇಕು, ಏಕೆ?**

**ಸೋಮವಾರ** **ಆಗಸ್ಟ್ 24**

## ಮನೋವೃತ್ತಿಯನ್ನು ಕ್ರಮಪಡಿಸುವಿಕೆ

ನಮ್ಮ ಮನೋವೃತ್ತಿಯು, ಮತ್ತೊಬ್ಬರ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ನಿಷ್ಕರ್ಷಿಸುತ್ತದೆ. ಒಂದು ಒರಟಾದ, ಟೀಕಾರೂಪದ ಮತ್ತು ಸ್ನೇಹಭಾವವಿಲ್ಲದ ಮನೋವೃತ್ತಿಯು ಜನರನ್ನು ನಿಮ್ಮಿಂದ ದೂರವಿಡುತ್ತದೆ. ನಿಮಗೆ ಒಳ್ಳೇ ಸಾಕ್ಷಿ ಕೊಡುವ ಸಾಮರ್ಥ್ಯವಿದ್ದರೂ, ನೀವು ಎಷ್ಟೇ

ಸತ್ಯವಂತರಾಗಿದ್ದರೂ ನಿಮ್ಮ ಮಾತುಗಳನ್ನು ಅಂಗೀಕಾರ ಮಾಡಿಕೊಳ್ಳುವ ಜನರು ಬಹಳ ಕಡಿಮೆಯೇ ಸರಿ.

ಇಂತಹ ಮನೋವೃತ್ತಿಗೆ ಬದಲಾಗಿ, ಒಂದು ಧನಾತ್ಮಕ ಮನೋವೃತ್ತಿ ಮತ್ತು ಇತರರಲ್ಲಿ ನಂಬಿಕೆ ಅವರನ್ನು ನಮ್ಮ ಬಳಿಗೆ ಎಳೆದು ತರುತ್ತದೆ. ಇದು ಒಂದು ಸ್ನೇಹದ ಬಂಧವನ್ನು ಹುಟ್ಟುಹಾಕುತ್ತದೆ. ಯೇಸುಸ್ವಾಮಿಯವರು ಒಂದು ತತ್ವವನ್ನು ಎಷ್ಟು ಸುಂದರವಾಗಿ ಹೇಳಿದ್ದಾರೆ ನೋಡಿ : "**ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳೆನ್ನುವುದಿಲ್ಲ; ಯಜಮಾನನು ಮಾಡುವಂಥದು ಆಳಿಗೆ ತಿಳಿಯುವುದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ**" (ಯೋಹಾನ 15:15). ನಮ್ಮಲ್ಲಿ ಬಲಹೀನತೆಗಳಿದ್ದರೂ ಮತ್ತು ತಪ್ಪು-ಒಪ್ಪುಗಳಿದ್ದರೂ ಸ್ನೇಹಿತರುಗಳು ಒಬ್ಬರನ್ನೊಬ್ಬರು ಅಂಗೀಕಾರ ಮಾಡಿಕೊಳ್ಳುತ್ತಾರೆ ಮತ್ತು ತಮ್ಮ ಸಂತೋಷಗಳನ್ನು ಹಾಗು ಸಂಕಟಗಳನ್ನು ಬಿಚ್ಚು ಹೃದಯದಿಂದ ಹಂಚಿಕೊಳ್ಳುತ್ತಾರೆ.

ಮತ್ತಾಯ 15:21-28 ಮತ್ತು ಮಾರ್ಕ 14:6-9ನ್ನು ಓದಿಕೊಳ್ಳಿರಿ. ಈ ವಾಕ್ಯಗಳು ಇಬ್ಬರು ವಿಭಿನ್ನ ಸನ್ನಿವೇಶದಿಂದ ಬಂದ ಸ್ತ್ರೀಯರನ್ನು ಕುರಿತು ಮಾತನಾಡುತ್ತವೆ. ಯೇಸುಸ್ವಾಮಿ ಒಬ್ಬಳೊಂದಿಗೆ ಒರಟಾಗಿಯೂ ಮತ್ತು ಇನ್ನೊಬ್ಬಳೊಂದಿಗೆ ಮೃದುವಾಗಿಯೂ ನಡೆದುಕೊಂಡಿದ್ದನು. ಯೇಸುಕ್ರಿಸ್ತನು, ತನ್ನ ರಕ್ಷಣೆಯ ಕೃಪೆಯಿಂದ ಜನರ ಬಳಿಗೆ ಹೋಗುತ್ತಾನೆ ಮತ್ತು ಅವರಲ್ಲಿ ನಂಬಿಕೆಯನ್ನು ಬೆಳೆಸುತ್ತಾನೆ ಎಂಬುದಕ್ಕೆ ಈ ವೇದ ಭಾಗಗಳಲ್ಲಿರುವ ಸೂಚನೆಗಳೇನು?

ಮತ್ತಾಯ 15ನೇ ಅಧ್ಯಾಯದಲ್ಲಿ ಬರುವ ಆ ಸ್ತ್ರೀ ಕಾನಾನ್ಯಳಾಗಿದ್ದಳು. ಮೊದಲಿಗೆ ಯೇಸುಸ್ವಾಮಿ ಬೇಕೆಂದೇ ಆಕೆಯ ಕೋರಿಕೆಯನ್ನು ತಿರಸ್ಕರಿಸುತ್ತಾನೆ. ಆಕೆ ಆತನನ್ನು ಪ್ರೀತಿಸಲಾರಂಭಿಸುತ್ತಾಳೆ. ಪೀಡಿಸುವಿಕೆಯಿಂದ ಆಕೆಯ ನಂಬಿಕೆ ಬೆಳೆಯಳೆಂದೇ ಹಾಗೆ ಮಾಡಿರುತ್ತಾನೆ. ಕಾಲಾಂತರದಲ್ಲಿ ಆಕೆಯ ಬಯಕೆಯನ್ನು ನೆರವೇರಿಸುತ್ತಾನೆ ಮತ್ತು ನಂತರದಲ್ಲಿ ಆತನ ಕಾಲದಲ್ಲಿದ್ದ ಧಾರ್ಮಿಕ ನಾಯಕರು ಆ ಬಡ ಕಾನಾನ್ಯ ಸ್ತ್ರೀಯ ನಂಬಿಕೆಗೆ ಸರಿಸಮಾನರಾಗರೆಂದು ಹೇಳುತ್ತಾನೆ.

ಆತನು ಸಾರ್ವಜನಿಕವಾಗಿ : "**ಅಮ್ಮಾ, ನಿನ್ನ ನಂಬಿಕೆ ಬಹಳ**" ಎಂದು ಹೇಳಿದ್ದನು (ಮತ್ತಾಯ 15:28). ಹಿಂದೆಂದೂ ಧಾರ್ಮಿಕ ಗುರುಗಳು ನೀಡದಿದ್ದ ಅತ್ಯಂತ ಶ್ರೇಷ್ಠವಾದ ಅಭಿನಂದನೆಯನ್ನು ಆಕೆಗೆ ಆತ ನೀಡಿದ್ದನು. ಆಕೆಯ ಮನಸ್ಸು ಅದೆಷ್ಟು ಆನಂದದಿಂದ ಗರಿಗೆದರಿ ಹಾರಾಡಿರಬೇಕು ಮತ್ತು ಎಷ್ಟರಮಟ್ಟಿಗೆ ಹೃದಯ ಪರಿವರ್ತನೆಗೆ ಒಳಪಟ್ಟಿರಬೇಕೆಂದು ಕಲ್ಪನೆ ಮಾಡಿ ನೋಡಲು ನಿಮ್ಮಿಂದ ಸಾಧ್ಯವೇ?

ಯೇಸುಕ್ರಿಸ್ತನ ಪಾದವನ್ನು ದುಬಾರಿ ತೈಲದಿಂದ ಅಭಿಷೇಕ ಮಾಡಿದವಳು ಯೆಹೂದಿಯಾಗಿದ್ದಳು. ಕುಖ್ಯಾತಿಗೊಳಗಾಗಿದ್ದಳು. ಜೀವನದಲ್ಲಿ ತುಂಬಾ ಕೆಟ್ಟದಾದ ವಿಫಲತೆಗಳನ್ನು ಕಂಡಿದ್ದಳು. ಆಗಾಗ್ಗೆ ಪಾಪ ಮಾಡುತ್ತಿದ್ದಳು, ಆದರೆ ಯೇಸು ಆಕೆಯ ಪಾಪಗಳನ್ನು ಮನ್ನಿಸಿದ್ದನು. ಆಕೆಯ ಮನಸ್ಸಿನಲ್ಲಿ ಪರಿವರ್ತನೆಯನ್ನು ತಂದಿದ್ದನು. ಆಕೆಯಲ್ಲಿ ಹೊಸ ಜೀವನವನ್ನು ಸೃಷ್ಟಿಸಿದ್ದನು. ಎಲ್ಲರೂ ಆಕೆಯನ್ನು ಟೀಕಿಸುತ್ತಿದ್ದಾಗ, ಆತ ಮಾತ್ರ ಅವಳನ್ನು ಪ್ರಶಂಸಿಸುತ್ತಾನೆ. ಆಕೆಯ ನಡೆದುಕೊಂಡ ರೀತಿಯನ್ನು ಅನುಮೋದಿಸುತ್ತಾನೆ. ಆಕೆಯನ್ನು ಕುರಿತು "ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲೂ ಸಾರಲಾಗುವುದೋ ಅಲ್ಲಲ್ಲಿ ಈಕೆ ಮಾಡಿದ್ದನ್ನೂ ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು" (ಮಾರ್ಕ 14:9).

**ಮೇಲಿನ ಎರಡು ಕಥೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಒಂದು ಧನಾತ್ಮಕ ಗೆಲುವಿನ ಮನೋವೃತ್ತಿ ಬೆಳೆಯಿಸಿಕೊಳ್ಳಲು ಇರಬೇಕಾದ ಅವಶ್ಯಕತೆಗಳೇನು ಎಂದು ಹೇಳಬಲ್ಲಿರಾ? ಸಾಕ್ಷಿ ಕೊಡುವುದಕ್ಕೆ ಮಾತ್ರವಲ್ಲ, ಆದರೆ ಸಾಮಾನ್ಯ ಜೀವನಕ್ಕೆ ಎಂತಹ ಮನೋವೃತ್ತಿಗಳ ವ್ಯವಸ್ಥಾಪನೆ ಆಗಬೇಕಾಗಿದೆ?**

**ಮಂಗಳವಾರ** **ಆಗಸ್ಟ್ 25**

## ಪ್ರೀತಿಯಿಂದ ಸತ್ಯದ ಪ್ರತಿಪಾದನೆ

ಸ್ನೇಹಮಯವಾಗಿದ್ದ ಬಿಟ್ಟ ಮಾತ್ರಕ್ಕೆ ಜನರನ್ನು ದೇವರಿಗೆ ಗೆಲ್ಲಲು ಸಾಧ್ಯವಾಗುವುದಿಲ್ಲ. ನಮಗೆ ಬಹಳ ಜನ ಸ್ನೇಹಿತರಿರಬಹುದು. ಅವರೊಂದಿಗೆ ನಾವು ಸಂತೋಷದಿಂದಿರಬಹುದು ಮತ್ತು ಅವರು ನಮ್ಮೊಂದಿಗೆ

ಸಂತೋಷದಿಂದಿರಬಹುದು, ಆದರೆ ಯೇಸು ಎಂದರೆ ಯಾರು ಎಂಬುದನ್ನು ನಾವು ಅವರಿಗೆ ತಿಳಿಸದಿದ್ದರೆ, ನಮ್ಮ ಬದುಕನ್ನು ಆತ್ಮನು ಹೇಗೆ ಬದಲಾಯಿಸಿದನು ಎಂದು ಹೇಳದಿದ್ದರೆ, ನಮ್ಮ ಸ್ನೇಹದಲ್ಲಿ ಶಾಶ್ವತವಾದ ವ್ಯತ್ಯಾಸವೊಂದು ಹಾಗೇ ಉಳಿದುಬಿಡಬಹುದು. ನಮ್ಮ ಇರುವಿಕೆ ಹಲವರಿಗೆ ಸಂತೋಷ ತಂದಿರಬಹುದು. ಆದರೆ ಹಲವರಿಗೆ ಸಂತೋಷ ಕೊಡುವಂತದ್ದಕ್ಕಿಂತಲೂ ಹೆಚ್ಚಿನದನ್ನು ಸಾಧಿಸಲು ಯೇಸು ಕರೆ ಕೊಡುತ್ತಿದ್ದಾನೆ. ಸ್ನೇಹ ಮಾತ್ರ ಜನರನ್ನು ಕ್ರಿಸ್ತನ ಬಳಿಗೆ ಕರತರುವುದಿಲ್ಲ. ಆದರೆ ಸ್ನೇಹಮಯ ಗುಣವಿಲ್ಲದ ಮನೋವೃತ್ತಿ ಕ್ರಿಸ್ತನಿಂದ ಜನರನ್ನು ದೂರ ಕರೆದುಕೊಂಡು ಹೋಗಿಬಿಡಬಹುದು.

ಅಪೋಸ್ತಲನಾದ ಪೌಲನು– "**ಪ್ರೀತಿಯಿಂದ ಸತ್ಯವನ್ನನುಸರಿಸು**" ಎಂದು ಸತ್ಯವನ್ನಾಡಲು ನೆನಪಿಸುತ್ತಾನೆ" (ಎಫೆಸ 4:15). ಎಲ್ಲೆಲ್ಲಿ ಜನರನ್ನು ಒಪ್ಪಿಕೊಳ್ಳಲು ಸಾಧ್ಯವೋ ಅಲ್ಲಿ ಒಪ್ಪಿಕೊಳ್ಳೋಣ, ಅಂಗೀಕಾರವನ್ನು ಸ್ಪಷ್ಟವಾಗಿ ಹೇಳೋಣ ಮತ್ತು ಎಲ್ಲಿ ಅವರನ್ನು ಅಭಿನಂದಿಸಬೇಕೋ ಅಲ್ಲಿ ಖಂಡಿತಾ ಅಭಿನಂದಿಸೋಣ. ಹೀಗೆ ಮಾಡಿದಾಗ ಸ್ನೇಹದ ಬಂಧನ ಬಲವಾಗಿ ಬೆಳೆಯುತ್ತದೆ. ಜನರಲ್ಲಿ ಕೆಟ್ಟದ್ದನ್ನೇ ಹುಡುಕದೆ, ಅವರಲ್ಲಿರುವ ಒಳ್ಳೆಯದನ್ನೇ ಕಂಡುಕೊಳ್ಳುವುದು ಬಹು ಮುಖ್ಯವೇಕೆ?

**2 ಥೆಸ 1:1–4ನ್ನು ಓದಿಕೊಳ್ಳಿರಿ. ಪೌಲನು, ಇಲ್ಲಿ ಥೆಸಲೋನಿಕದವರ ಕುರಿತು ಮಾಡಿರುವ ಶ್ಲಾಘನೆಗಳನ್ನು ಪಟ್ಟಿಮಾಡಿರಿ.**

ಬೇರೆಯವರಲ್ಲಿ ತಪ್ಪನ್ನು ಹುಡುಕುವುದರಲ್ಲೂ ಕೆಲವರು ಸಂತೋಷಪಡುತ್ತಾರೆ. ಅದಕ್ಕೆ ಕಾರಣ : ಅವರಿಗೆ ಹಾಗೆ ಮಾಡಿದಾಗ ಮಾತ್ರ ತಮ್ಮ ಮನಸ್ಸಿಗೆ ಹಾಯಾಗಿದೆ ಎನ್ನುತ್ತಾರವರು.

ಅಪೋಸ್ತಲನಾದ ಪೌಲನು ಮೇಲಿನ ಹೇಳಿಕೆಗೆ ವಿರುದ್ಧವಾಗಿ ನಡೆದುಕೊಂಡಿದ್ದನು. ತಾನು ಯಾವ ಸಭೆಗೆ ಸೇವೆ ಮಾಡಿದನೋ, ಆ ಸಭೆಯವರಲ್ಲಿ ಧನಾತ್ಮಕ ನಡೆಯನ್ನೇ ಎದುರು ನೋಡುತ್ತಿದ್ದನು. ಅವರ ತಪ್ಪನ್ನು

ತೆಗಳಲಿಲ್ಲ ಅವರ ಪಾಪವನ್ನು ಮನ್ನಿಸಲಿಲ್ಲ. ಅವನಿಗಿದ್ದದ್ದೂ ಒಂದೇ ಉದ್ದೇಶ; ತಾನು ಸಂಸ್ಥಾಪಿಸಿದ ಸಭೆಗಳನ್ನು ಬೆಳೆಸುವುದಷ್ಟೇ. ಅದಕ್ಕೆ ಅವನು ಅನುಸರಿಸಿದ ಮಾರ್ಗಗಳಲ್ಲಿ ಒಂದು; ಸಭೆಯವರು ಸರಿಯಾಗಿ ನಡೆದುಕೊಂಡಾಗ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸುವುದು.

ವೈಟಮ್ಮನವರ ಧನಾತ್ಮಕ ಸಂಬಂಧಗಳ ಪ್ರಾಮುಖ್ಯತೆಯನ್ನು ಕುರಿತ ಈ ಹೇಳಿಕೆ ಅಪೂರ್ವವಾದದ್ದು: "ನಾವು ದೇವರ ಮುಂದೆ ನಮ್ಮನ್ನು ತಗ್ಗಿಸಿಕೊಂಡು, ಕರುಣೆಯುಳ್ಳವರು , ವಿನಯಶೀಲರು, ಸುಕೋಮಲಹೃದಯವಂತರೂ ಮತ್ತು ದಯಾಮಯಿಗಳೂ ಆಗಿದ್ದರೆ, ಒಬ್ಬರನ್ನು ಪರಿವರ್ತನೆ ಮಾಡುತ್ತಿದ್ದ ನಾವು ಅದೇ ಸ್ಥಳದಲ್ಲಿ ನೂರು ಜನರನ್ನು ಪರಿವರ್ತನೆ ಮಾಡಲು ಶಕ್ತರಾಗುತ್ತೇವೆ"– ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 9, ಪುಟ 189.

**ಮೇಲಿನ ಹೇಳಿಕೆಯನ್ನು ಕುರಿತು ಒಂದು ಕ್ಷಣ ಚಿಂತನೆ ಮಾಡಿರಿ. ನಿಮ್ಮ ಸಭೆಯ ಪ್ರತಿಯೊಬ್ಬ ಸದಸ್ಯರ ಹೃದಯದಿಂದ ಕರುಣೆ, ವಿನಯಶೀಲತೆ, ಸುಕೋಮಲತೆ ಮತ್ತು ದಯೆ ತುಂಬಿ ಹೊರಸೂಸುತ್ತಿದ್ದರೆ ನಿಮ್ಮ ಸಭೆ ಹೇಗಿರುತ್ತದೆ? ನಿಮ್ಮ ಹೃದಯವನ್ನು ಪರಿಶೋಧಿಸಿ ನೋಡಿರಿ. ನಂತರ ಮೇಲಿನ ಯಾವ ಯಾವ ರಂಗದಲ್ಲಿ ಇನ್ನು ನಿಮ್ಮಲ್ಲಿ ಸುಧಾರಣೆ ಬರಬೇಕೆನಿಸುತ್ತಿದೆ?**

**ಬುಧವಾರ** **ಆಗಸ್ಟ್ 26**

## ಅಂಗೀಕಾರದ ಅಸ್ತಿವಾರ

**ರೋಮ 15:7 ಮತ್ತು ಎಫೆಸ 4:32ನ್ನು ಓದಿಕೊಳ್ಳಿರಿ. ಅಂಗೀಕಾರದ ಅಸ್ತಿವಾರವನ್ನು ನೀವು ಹೇಗೆ ವಿವರಿಸುವಿರಿ? ಒಂದು ಅಂಗೀಕಾರದ ಮನೋಭಾವಕ್ಕೆ ಇರಬೇಕಾದ ಮೂಲಸ್ವಭಾವವೇನು?**

ಈ ಎರಡೂ ಸತ್ಯವೇದ ಭಾಗಗಳಲ್ಲಿ ನಾವು ಒಬ್ಬರನ್ನೊಬ್ಬರು ಅಂಗೀಕಾರ ಮಾಡಿಕೊಳ್ಳುವುದರಲ್ಲಿ ಅಡಗಿರುವ ತತ್ವಗಳನ್ನು ಪೌಲನು ಪ್ರಸ್ತಾಪಿಸಿದ್ದಾನೆ. ಕ್ರಿಸ್ತನು

ನಮ್ಮಲ್ಲಿ ಪ್ರತಿಯೊಬ್ಬರನ್ನೂ ಕ್ಷಮಿಸಿದ್ದಾನೆ ಮತ್ತು ಅಂಗೀಕಾರ ಮಾಡಿಕೊಂಡಿದ್ದು ಹೀಗಿರುವಾಗ, ನಾವು ಒಬ್ಬರನ್ನೊಬ್ಬರು ಕ್ಷಮಿಸಲು ಮತ್ತು ಅಂಗೀಕಾರ ಮಾಡಿಕೊಳ್ಳಲು ತಿರಸ್ಕಾರ ಮಾಡಬಹುದೇ? ಯೇಸು ಕ್ರಿಸ್ತನು ನಮ್ಮಲ್ಲಿ ಏನೇ ದೋಷವಿದ್ದರೂ ನಮ್ಮನ್ನು ಅಂಗೀಕಾರ ಮಾಡಿಕೊಂಡ ಹಾಗೆ, ನಮ್ಮ-ನಮ್ಮಲ್ಲಿ ಏನೇ ಲೋಪ-ದೋಷಗಳಿದ್ದರೂ, ನಾವೂ ಒಬ್ಬರನ್ನೊಬ್ಬರು ಅಂಗೀಕಾರ ಮಾಡಿಕೊಳ್ಳಬೇಕು.

ಇದರ ಅರ್ಥವನ್ನು ಕುರಿತು ಆಳವಾಗಿ ಚಿಂತಿಸೋಣ. ನಿಮ್ಮನ್ನು ಕುರಿತೇ ಆಲೋಚನೆ ಮಾಡಿರಿ. ನೀವು ಮಾಡಿದ ಕೆಲವೊಂದು ಕೆಲಸಗಳನ್ನು ನೆನೆಸಿ ನೋಡಿರಿ. ಈಗಲೂ ನಿಮಗಿರುವ ಹೋರಾಟಗಳನ್ನು ಕುರಿತು ಸಹ ಆಲೋಚಿಸಿರಿ. ನಿಮಗೆ ಮಾತ್ರ ಗೊತ್ತಿರಬಹುದಾದ, ಇತರರಿಗೆ ಗೊತ್ತು ಬಂದರೆ ಭಯ ಬೀಳಿಸಬಹುದಾದ ಸಂಗತಿಗಳ ವಿಷಯವನ್ನು ಕುರಿತೂ ಸಹ ಚಿಂತಿಸಿರಿ.

ಆದರೂ ಇನ್ನೇನು? ನಂಬಿಕೆಯಿಂದ ಕ್ರಿಸ್ತನಲ್ಲಿ ನೀವು ಅಂಗೀಕಾರವಾಗಿದ್ದೀರಿ. ಎಲ್ಲವೂ ಎಲ್ಲರಿಗೂ ಗೊತ್ತಿರುವುದಿಲ್ಲ. ಆದರೆ ಕ್ರಿಸ್ತನಿಗೆ ಎಲ್ಲವೂ ಗೊತ್ತು. ಆದರೂ ಆತನು ನಿಮ್ಮನ್ನು ಅಂಗೀಕಾರ ಮಾಡಿಕೊಳ್ಳುತ್ತಾನೆ. ನೀವು ಒಳ್ಳೆಯವರೆಂದು ನಿಮ್ಮನ್ನು ಅಂಗೀಕಾರ ಮಾಡಿಕೊಳ್ಳುವುದಿಲ್ಲ. ಆದರೆ ಆತನು ಒಳ್ಳೆಯವನಾಗಿರುವುದರಿಂದ ನಿಮ್ಮನ್ನು ಅಂಗೀಕಾರ ಮಾಡಿಕೊಳ್ಳುತ್ತಿದ್ದಾನೆ. ಹಾಗಾದರೆ ಇತರರ ಬಗ್ಗೆ ನಿಮ್ಮ ಮನೋವೃತ್ತಿ ಏನಾಗಿರಬೇಕು?

ಕೆಲವರಿಗೆ ಈ ಪರಿಕಲ್ಪನೆ ಅರ್ಥಮಾಡಿಕೊಳ್ಳುವುದು ಕಷ್ಟವಾಗಬಹುದು. ಒಂದು ನಿಷ್ಕಪಟ ಅಂಗೀಕಾರವೆಂದರೆ : ಅವರು ಹೇಗಿದ್ದಾರೋ ಹಾಗೆಯೇ ಅವರನ್ನು ಅಂಗೀಕರಿಸಿಕೊಳ್ಳುವುದು. ಅವರಿಗಿರುವ ಪಾಪ ಸ್ವಭಾವಗಳ ಸಹಿತವಾಗಿಯೇ ಅವರನ್ನು ಅಂಗೀಕರಿಸಿರಿ. ಯಾಕೆಂದರೆ ಅವರೂ ಸಹ ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟ ಮಾನವ ಜೀವಿಗಳು. "**ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟ**"ದ್ದರಿಂದಲೂ **ಮತ್ತು ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನ**" ಮಾಡಿದ್ದರಿಂದ, ನಾವೂ ಸಹ ಇತರರನ್ನೂ ಕ್ಷಮಿಸಬಹುದು ಮತ್ತು ಅಂಗೀಕಾರ

ಮಾಡಿಕೊಳ್ಳಬಹುದು. ಆತನು ನಮಗೆ ತೋರಿದ ಪ್ರೀತಿ, ನಾವು ಇತರರಿಗೆ ತೋರುವ ಪ್ರೀತಿ ಮತ್ತು ಅಂಗೀಕಾರಕ್ಕೆ ಅಸ್ತಿವಾರವಾಗುತ್ತದೆ (ರೋಮ 5:6–10).

ಒಮ್ಮೆ ಅಂಗೀಕಾರ ಮಾಡುವ ಮತ್ತು ಆರೈಕೆ ಮಾಡುವ ಸಂಬಂಧ ಸಂಸ್ಥಾಪಿಸಲ್ಪಟ್ಟರೆ, ಸತ್ಯವೇದದ ಸತ್ಯಗಳಿಂದ ಮತ್ತೊಬ್ಬ ವ್ಯಕ್ತಿಯನ್ನು ಪ್ರೀತಿಯಿಂದ ಸಂಧಿಸುವುದು ಅನಿವಾರ್ಯವಾಗಿ ಬಿಡುತ್ತದೆ. ಇದನ್ನು ಮಾಡಲು ವಿಫಲಗೊಳ್ಳುವದೆಂದರೆ, ಪ್ರೀತಿಸಲೂ ತಿರಸ್ಕಾರ ಮಾಡಿದ್ದಂತೆಯೇ ಸರಿ. ಸ್ನೇಹಿತರಾಗಿ, ನಾವು ಸಾಕಷ್ಟು ಜೀವನವನ್ನು ಬದಲಾಯಿಸುವ ಮತ್ತು ನಿತ್ಯಕಾಲದ ಸತ್ಯಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇವೆ.

"ನಿನಗನ್ನಿಸಿದ್ದನ್ನೆಲ್ಲಾ ಮಾಡು. ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡ, ಈಗಲೂ ನಾನು ನಿನ್ನನ್ನು ಅಂಗೀಕಾರ ಮಾಡಿಕೊಳ್ಳುವೆ" ಎಂಬುದು ಕ್ರಿಸ್ತನ ಮನೋವೃತ್ತಿಯಲ್ಲ. ಆದರೆ ಆತನ ಮನೋವೃತ್ತಿಯೇನೆಂದರೆ– "ನೀನು ಹಿಂದೆ ಏನೂ ಮಾಡಿದ್ದರೂ, ನಾನು ಕ್ಷಮಿಸಲೂ ಸಿದ್ಧನಿದ್ದೇನೆ ಮತ್ತು ನೀನು ಪರಿವರ್ತನೆಗೊಳ್ಳಲು ಬೇಕಾದ ಶಕ್ತಿಯನ್ನು ನಾನು ನಿನಗೆ ಕೊಡುತ್ತೇನೆ". ಪ್ರೀತಿಯ ಮನೋವೃತ್ತಿಯಿಂದ, ಕ್ರಿಸ್ತನಾತ್ಮನ ಮಾರ್ಗದರ್ಶನದಲ್ಲಿ ತಗ್ಗಿದ ಭಾವದಿಂದ ಸತ್ಯವೇದದ ಸತ್ಯಗಳನ್ನು ಪ್ರಸ್ತುತಪಡಿಸಿದಾಗ, ಅದು ಹೃದಯಗಳನ್ನು ಗೆಲ್ಲುತ್ತದೆ ಮತ್ತು ಜೀವನಗಳನ್ನು ಬದಲಾಯಿಸುತ್ತದೆ.

**ಒಬ್ಬ ವ್ಯಕ್ತಿಯ ಪಾಪ ಸ್ವಭಾವವನ್ನು ಅಂಗೀಕರಿಸಿಕೊಳ್ಳದೆ, ಅವನನ್ನು ಅಂಗೀಕಾರ ಮಾಡಿಕೊಳ್ಳುವುದು ಹೇಗೆ ಸಾಧ್ಯ? ವ್ಯಕ್ತಿಯನ್ನು ಅಂಗೀಕಾರ ಮಾಡಿಕೊಳ್ಳುತ್ತೇನೆ. ಆದರೆ ಅದೇ ಸಮಯದಲ್ಲಿ ಆ ವ್ಯಕ್ತಿಯ ಪಾಪವನ್ನು ಮನ್ನಿಸುವುದಿಲ್ಲ ಅಥವಾ ಸಹಿಸುವುದಿಲ್ಲ ಅಂದರೆ ಅದು ಹೇಗೆ ಸಾಧ್ಯ?**

**ಗುರುವಾರ** **ಆಗಸ್ಟ್ 27**

## ಸತ್ಯದ ಪ್ರೀತಿಪೂರ್ವಕ ಪ್ರತಿಪಾದನೆ

"ಪ್ರೀತಿಯ" ಸಲುವಾಗಿ ಯೇಸುಸ್ವಾಮಿ ಸತ್ಯದ ಪ್ರತಿಪಾದನೆ ಮಾಡಲು ಅಲಕ್ಷಿಸಲಿಲ್ಲ, ಯಾಕೆಂದರೆ ಅಂತಹ ಪ್ರೀತಿ, ಪ್ರೀತಿಯೆನ್ನಿಸಿಕೊಳ್ಳುತ್ತಿರಲಿಲ್ಲ. ಪ್ರೀತಿ

ಯಾವಾಗಲೂ ಮತ್ತೊಬ್ಬರಿಗೆ ಒಳ್ಳೆಯದನ್ನೇ ಬಯಸುತ್ತದೆ. ಪ್ರೀತಿ ಮತ್ತು ಸತ್ಯದ ನಡುವೆ ಯಾವುದೇ ಘರ್ಷಣೆಗಳಿಲ್ಲ. ವಿನಯಶೀಲತೆಯಿಂದಲೂ ಮತ್ತು ದಯೆಯಿಂದಲೂ ಪ್ರತಿಪಾದಿಸಿದ ಸತ್ಯವೇ ಪ್ರೀತಿಯ ಹೇಳಿಕೆ. ಯೇಸುಸ್ವಾಮಿ– **"ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ"** ಎಂದು ಹೇಳಿದ್ದನು. **ಆದ್ದರಿಂದಲೇ ಪೇತ್ರನು– "ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ"** ಎಂದು ಹೇಳಿದ್ದನು (ಅ.ಕೃ. 4:12). ಆತನ ಕೃಪೆ ನಮ್ಮನ್ನು ರಕ್ಷಿಸುವುದರಿಂದ, ಆತನ ಸತ್ಯತೆಯನ್ನು ತಿಳಿದುಕೊಳ್ಳುವುದೂ ಮತ್ತು ಆತನ ಜೀವನವನ್ನು ಜೀವಿಸುವುದು ನಮಗೆ ಸಾಧ್ಯವಾಗಿದೆ. ಪ್ರೀತಿಯಿಲ್ಲದ ಸತ್ಯವು ಉಸಿರುಕಟ್ಟಿಸುವ ಕರ್ಮ ಪ್ರಾಧಾನ್ಯವಾದೆಡೆಗೆ ಕೈಹಿಡಿದು ನಡೆಸುತ್ತದೆ. ಇಂತಹ ನಡೆ ನಮ್ಮ ಆಧ್ಯಾತ್ಮಿಕ ಜೀವನವನ್ನು ದಮನ ಮಾಡುತ್ತದೆ. ಸತ್ಯವಿಲ್ಲದ "ಪ್ರೀತಿ"ಯು ಹುರುಳಿಲ್ಲದ ಸ್ವೈರಣೆಯ ಭಾವಾತಿರೇಕದೆಡೆಗೆ ನಡೆಸುತ್ತದೆ; ವ್ಯಕ್ತಿಯನ್ನು ಅನಿಶ್ಚತತೆಯೆಂಬ ಸಮುದ್ರದಲ್ಲಿ ಗೊತ್ತು ಗುರಿಯಿಲ್ಲದ ಹಾಗೆ ಅಲೆದಾಡುವಂತೆ ಮಾಡಿಬಿಡುತ್ತದೆ. ಅದೇ ಸಮಯದಲ್ಲಿ ಪ್ರೀತಿಯಿಂದ ಪ್ರತಿಪಾದಿಸಿದ ಸತ್ಯವು ಒಂದು ವಿಶ್ವಾಸಾರ್ಹ ಕ್ರೈಸ್ತೀಯ ಅನುಭವದೆಡೆಗೆ ನಡೆಸುತ್ತದೆ. ಇಂತಹ ನಡೆ ಸ್ಪಷ್ಟವಾದ ದಿಗ್ದರ್ಶನವನ್ನೂ, ಉದ್ದೇಶವನ್ನೂ ಮತ್ತು ಖಚಿತತೆಯನ್ನು ಕೊಡುವಂತಹುವಾಗಿದೆ.

**1 ಪೇತ್ರ 3:15; 2 ತಿಮೊಥಿ 4:2; ಮತ್ತು ತೀತ 3:4,5ನ್ನು ಓದಿಕೊಳ್ಳಿರಿ. ಸತ್ಯವೇದದ ಸತ್ಯವನ್ನು ಪ್ರಸ್ತುತಪಡಿಸುವಿಕೆಗಳಿಗೂ ಮತ್ತು ವಿನಯಶೀಲ ಆತ್ಮದ ಅಂಗೀಕರಿಸುವಿಕೆಗಳಿಗೂ ನಡುವಿನ ಸಮತೋಲನವನ್ನು ಪ್ರಸ್ತುತ ಪಡಿಸುವುದರಲ್ಲಿ ಈ ವಚನಗಳಲ್ಲಿರುವ ಅಭಿವ್ಯಕ್ತತೆ ಎಂತಹದು?**

ಹೊಸ ಒಡಂಬಡಿಕೆಯ ಬರಹಗಾರರ್ಯಾರು, ಎಂದೂ, ಸತ್ಯದ ಮೇಲೆ ಪ್ರೀತಿಯನ್ನು ಒತ್ತಿ ಹೇಳಿರಲಿಲ್ಲ. ಬಹಳ ಸುಂದರವಾಗಿ ಪ್ರೀತಿಯನ್ನೂ ಮತ್ತು ಸತ್ಯವನ್ನೂ, ಕೃಪೆಯನ್ನೂ ಮತ್ತು ಆಜ್ಞೆಯನ್ನೂ, ಅನುಕಂಪವನ್ನೂ ಮತ್ತು

ಪ್ರಾಮಾಣಿಕತೆಯನ್ನೂ ಅವರು ಬಹಳ ಸುಂದರವಾಗಿ ಮಿಶ್ರಣ ಮಾಡಿ ಒಂದುಗೂಡುವಂತೆ ಮಾಡಿದ್ದರು. ಪೇತ್ರನು ತನ್ನ ಸಂಗತಿಗಳಾದ ವಿಶ್ವಾಸಗಳಿಗೆ– **"ಅವರ ಬೆದರಿಸುವಿಕೆಗೆ ಹೆದರದೆ ಕಳವಳಪಡದೆ ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ. ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವುದಕ್ಕೆ ಯಾವಾಗಲು ಸಿದ್ಧವಾಗಿರಿ; ಆದರೆ ಅದನ್ನು ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ ಹೇಳಿರಿ"** ಎಂದು ಬುದ್ಧಿ ಹೇಳಿದ್ದನು (1 ಪೇತ್ರ 3:15). ಈ ವಾಕ್ಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನೀವು ಏನನ್ನು ನಂಬುತ್ತೀರಿ ಎಂಬುದು ನಿಮಗೆ ತಿಳಿದಿರಬೇಕು, ಏಕೆ ನಂಬುತ್ತೀರಿ, ಎಂಬುದು ನಿಮಗೆ ತಿಳಿದಿರಲಿ ಮತ್ತು ಏನನ್ನು ನಂಬುತ್ತೀರಿ ಮತ್ತು ಏಕೆ ನಂಬುತ್ತೀರಿ ಎಂಬುದನ್ನು ವಿವರಿಸಲು ಶಕ್ತರಾಗಿರ್ರಿ. ಇದರ ಅರ್ಥ ಎಲ್ಲದಕ್ಕೂ ನಿಮ್ಮಲ್ಲಿ ಉತ್ತರವಿದೆಯೆಂತಲೂ ಅಥವಾ ನಿಮ್ಮ ನಂಬಿಕೆಯನ್ನು ಇತರರು ನಂಬುವಂತೆ ಮನದಟ್ಟು ಮಾಡಿಕೊಡಬಲ್ಲಿರಿ ಎಂತಲೂ ಅರ್ಥವಲ್ಲ. ಸಾತ್ವಿಕತ್ವದಿಂದಲೂ ಮತ್ತು ಮನೋಭೀತಿಯಿಂದಲೂ ಅಂದರೆ : ವಿನಯ ಶೀಲತೆಯಿಂದಲೂ ಮತ್ತು ಪೇಚಿನಲ್ಲಿರುವ ವಿವಾದಗಳ ವಿಷಯದಲ್ಲಿ ಶ್ರೇಷ್ಠ ತಿಳುವಳಿಕೆಯಿಂದಲೂ ನಿಮ್ಮ ನಂಬಿಕೆಯನ್ನು ನೀವು ವಿವರಿಸಬಹುದು ಮತ್ತು ರಕ್ಷಿಸಬಹುದು.

ಪೌಲನು ತನ್ನ ಆಶ್ರಿತನಾದ ತಿಮೊಥಿಗೆ– **"ದೇವರವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು"** ಎಂಬ ಸಲಹೆಯನ್ನು ಕೊಟ್ಟಿದ್ದನು (2 ತಿಮೊಥಿ 4:2) ಮತ್ತು ತೀತನಿಗೆ– **"ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ. ಆತನ ಕರುಣೆಯಲ್ಲಿಯೂ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕನಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು"** ಎಂದು ಹೇಳುವ ಮೂಲಕ ನಾವು ಸತ್ಯವನ್ನು ಮತ್ತೆ ನೆನಸಿಕೊಳ್ಳುವಂತೆ ಮಾಡಿದ್ದಾನೆ (ತೀತ 3:3).

ನಮ್ಮನ್ನೂ ಸಹ, ಸತ್ಯವನ್ನು ಪ್ರೀತಿಯಿಂದಲೂ ಮತ್ತು ಸಾತ್ವಿಕತ್ವದಿಂದಲೂ ಹಾಗು ಮನೋಭೀತಿಯಿಂದಲೂ ಪ್ರಸ್ತುತಪಡಿಸಲು ಕರೆ ನೀಡಲಾಗಿದೆ. ಕ್ರಿಸ್ತನಲ್ಲದೆ

ಮರಣಿಸುತ್ತಿರುವ ಲೋಕಕ್ಕೆ, ಆತನ ಅಂತ್ಯಕಾಲದ ಸಂದೇಶವನ್ನು ಪ್ರೀತಿಯಿಂದ ಸಾರಲು, ನಮ್ಮ ದೇವರು, ಆತನ ಜೊತೆ ಕೈ ಜೋಡಿಸಬೇಕೆಂದು ಆಹ್ವಾನಿಸುತ್ತಿದ್ದಾನೆ.

**ನಿಮ್ಮನ್ನು ಯಾರಾದರೂ "ನೀವು ಏಕೆ ಕ್ರೈಸ್ತರಾಗಿದ್ದೀರಿ?" ಎಂದು ಕೇಳಿದರೆ, ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ? ಏಕೆ ಹಾಗೆ ಪ್ರತಿಕ್ರಿಯಿಸುತ್ತೀರಿ?**

**ಶುಕ್ರವಾರ** **ಆಗಸ್ಟ್ 28**

**ಹೆಚ್ಚಿನ ಚಿಂತನೆ :** ಕ್ರಿಸ್ತನಲ್ಲಿ ಕುರುಬನಲ್ಲಿರುವ ಸುಕೋಮಲತೆಯನ್ನೂ, ತಂದೆ–ತಾಯಿಯರಲ್ಲಿರುವ ವಾತ್ಸಲ್ಯವನ್ನೂ, ಕರುಣಾಮಯನಾದ ರಕ್ಷಕನಲ್ಲಿರುವ ಅಪ್ರತಿಮ ಕೃಪೆಯನ್ನು ಕಾಣಬಹುದು. ಆತನ ಆಶೀರ್ವಾದಗಳನ್ನು ಆತನು ಬಹಳ ಮೋಹಕವಾದ ರೀತಿಯಲ್ಲಿ ಪ್ರಸ್ತುತ ಪಡಿಸಿದ್ದಾನೆ. ಈ ಆಶೀರ್ವಾದಗಳನ್ನು ಘೋಷಣೆ ಮಾಡಿ ಸಂತೃಪ್ತಿ ಪಡುವವನು ಆತನಲ್ಲಿ ಅವುಗಳನ್ನು ಆತ ಬಹಳ ಆಕರ್ಷಕವಾದ ರೀತಿಯಲ್ಲಿ ವ್ಯಕ್ತಪಡಿಸಿದ್ದಾನೆ. ಅವುಗಳನ್ನು ನಾವು ಪಡೆದುಕೊಳ್ಳಲು ಆತ ನಮ್ಮನ್ನು ಉತ್ತೇಜಿಸಿದ್ದಾನೆ. ಹೀಗಾಗಿ ಆತನ ಸೇವಕರು, ಮಾತಿನಲ್ಲಿ ವರ್ಣಿಸಲಸಾಧ್ಯವಾದ ಆತನ ಮಹಿಮೆಯ ಸಂಪತ್ತನ್ನು ಅದ್ಭುತವಾಗಿ ಪ್ರಸ್ತುತಿ ಪಡಿಸಬೇಕು. ಕ್ರಿಸ್ತನ ಅಭೂತಪೂರ್ವ ಪ್ರೀತಿಯು ನಮ್ಮ ಹೃದಯವನ್ನು ಕರಗಿಸಿ ವಶಪಡಿಸಿಕೊಳ್ಳುವುದು. ಕೇವಲ ಕ್ರೈಸ್ತೀಯ ತತ್ವಗಳನ್ನು ಗಿಣಿಪಾಠದಂತೆ ಪುನಃ ಪುನಃ ಉಚ್ಚರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. "**ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ**" ಎಂದು ದೇವರು ಹೇಳುತ್ತಾನೆ. "**ಶುಭಸಮಾಚಾರವನ್ನು ತಿಳಿಸಬಲ್ಲ ಚೀಯೋನೇ, ಉನ್ನತಪರ್ವತವನ್ನು ಹತ್ತಿಕೋ; ಸುವರ್ತಮಾನವನ್ನು ಪ್ರಕಟಿಸಬಲ್ಲ ಯೆರೂಸಲೇಮೇ, ನಿನ್ನ ಧ್ವನಿಯನ್ನು ಗಟ್ಟಿಯಾಗಿ ಎತ್ತು, ನಿರ್ಭಯವಾಗಿ ಎತ್ತಿ ಯೆಹೂದ್ಯದ ಪಟ್ಟಣಗಳಿಗೆ– ಇಗೋ, ನಿಮ್ಮ ದೇವರು! ಆಹಾ, ಕರ್ತನಾದ ಯೆಹೋವನು ಶೂರನಾಗಿ ಬರುವನು, ತನ್ನ ಭುಜಬಲದಿಂದಲೇ ಆಳುವನು; ಇಗೋ, ಆತನ ಕ್ರಿಯಾಲಾಭವು ಆತನೊಂದಿಗಿದೆ, ಆತನ ಶ್ರಮದ ಫಲವು ಆತನ ಮುಂದಿದೆ, ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು, ಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿಕೊಳ್ಳುವನು. ಹಾಲು ಕುಡಿಸುವ ಕುರಿಗಳನ್ನು ಮೆಲ್ಲನೆ ನಡೆಸುವನು ಎಂದು ಸಾರು**" (ಯೆಶಾಯ 40:1, 9–11).

## ಚರ್ಚಿಸಬೇಕಾದ ಪ್ರಶ್ನೆಗಳು

(1) ಕೆಲವರು ಬೇರೆಯವರ ತಪ್ಪು-ಒಪ್ಪುಗಳನ್ನು ಎತ್ತಿ ತೋರಿಸಿ, ತಾವು ಮಾತ್ರ ನೀತಿವಂತರೆಂದು ಹೊಗಳಿಕೊಳ್ಳುವುದು ದುರ್ಭಾಗ್ಯವೇ ಸರಿ. ಇಂತಹ ಮನೋನೆಲೆಗೆ ನಾವು ಸಿಕ್ಕಿಬೀಳದ ಹಾಗೆ ನಮ್ಮನ್ನು ಕಾಪಾಡಿಕೊಳ್ಳುವುದು ಹೇಗೆ?

2. ಈ ದೃಶ್ಯ ವಿವರವನ್ನು ಗಮನಿಸಿರಿ : ಒಬ್ಬ ಸ್ನೇಹಿತ ಶವ ಸಂಸ್ಕಾರಕ್ಕೆ ಹೋಗಿ ಹಿಂತಿರುಗಿ ಬಂದಮೇಲೆ ಈ ರೀತಿಯಾಗಿ ಹೇಳಿದ್ದಾನೆ : "ನನ್ನ ಚಿಕ್ಕಮ್ಮ ಪರಲೋಕ ಸೇರಿಕೊಂಡದ್ದಕ್ಕೆ ನನಗೆ ಬಹಳ ಸಂತೋಷವಾಗಿದೆ. ಮೇಲೋಕದಿಂದ ಆಕೆ ನನ್ನನ್ನು ನೋಡುತ್ತಿದ್ದಾಳೆ. ಇದರಿಂದ ನನಗೆ ತುಂಬಾ ಹಿತವಾಗುತ್ತಿದೆ". ಈ ವಾರದ ಪಾಠದಲ್ಲಿ ನಾವು ಕಲಿತ ತತ್ವಗಳ ಆಧಾರದ ಮೇಲೆ ಈ ಹೇಳಿಕೆಗೆ ಹೇಗೆ ಪ್ರತಿಕ್ರಿಯಿಸುತ್ತೀರಿ? ಮರಣಿಸಿದ ವ್ಯಕ್ತಿಯ ಪರಿಸ್ಥಿತಿ ಏನೇ ಇರಲಿ, ಈ ಸಮಯವನ್ನು ಸಮಪಯೋಗಪಡಿಸಿಕೊಂಡು ಈ ವಿಷಯವಾಗಿ ಆ ಸ್ನೇಹಿತನಿಗೆ ಸತ್ಯವೇದ ಅಧ್ಯಯನ ನಡೆಸಬಾರದೇಕೆ?

3. ಬೇರೆಯವರಿಗೆ ನಾವು ಕೊಡಬೇಕಾಗಿರುವ ಸಾಕ್ಷಿಯ ಬೆಳಕಿನಲ್ಲಿ ಈ ಹೇಳಿಕೆಯನ್ನು ಕುರಿತು ಚರ್ಚೆಮಾಡಿರಿ : ಬೇರೆಯವರಲ್ಲಿ ಕೆಟ್ಟದ್ದನ್ನು ಹುಡುಕಲು ಆರಂಭಿಸುವವರು, ತಮ್ಮಲ್ಲಿಯೇ ಕೆಟ್ಟತನಗಳನ್ನು ಬೆಳೆಯಿಸಿಕೊಂಡು ಬಿಡುತ್ತಾರೆ. ಬೇರೆಯವರ ತಪ್ಪಿನ ಹುಡುಕಾಟದ ಗುಂಗಿನಲ್ಲಿಯೇ ಇರುವ ನಾವು, ಅವರಂತೆ ಬದಲಾಗಿಬಿಡುತ್ತೇವೆ. ಆದರೆ ಯೇಸುಕ್ರಿಸ್ತನನ್ನೇ ನೋಡುತ್ತಿರುವವರು, ಆತನ ಪ್ರೀತಿ ಮತ್ತು ಪರಿಪೂರ್ಣ ಗುಣಗಳ ಬಗ್ಗೆ ಮಾತನಾಡುವವರು, ಆತನ ಸ್ವರೂಪಕ್ಕೆ ಬದಲಾಗಿ ಬಿಡುತ್ತೇವೆ. ನಮ್ಮ ಮುಂದಿಟ್ಟಿರುವ ಆತನ ಆದರ್ಶಗಳನ್ನು ಕುರಿತು ಧ್ಯಾನ ಮಾಡುವಾಗ, ನಮ್ಮನ್ನು ಸ್ವಚ್ಛ ಹಾಗು ಪರಿಶುದ್ಧ ವಾತಾವರಣಕ್ಕೆ ದೇವರ ಸನ್ನಿಧಿಗೆ ಅದು ನಮ್ಮನ್ನು ಕೊಂಡೊಯ್ಯುವುದು. ನಾವು ಇಲ್ಲೇ ಇದ್ದರೂ, ನಮ್ಮಿಂದ ಹೊರಡುವ ಬೆಳಕು ನಮಗೆ ಸಂಬಂಧಪಟ್ಟವರಿಗೆಲ್ಲ ಉಲ್ಲಾಸವನ್ನುಂಟು ಮಾಡುವುದು" - ಎಲೆನ್ ಜಿ ವೈಟ್, ಗಾಸ್ಪೆಲ್ ವರ್ಕರ್ಸ್ ಪುಟ 479.